ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ಉಪತಹಶೀಲ್ದಾರವರ ನ್ಯಾಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/18/2016-17. ದಿನಾಂಕ 26-09-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಪಿ.ನಿಂಗಪ್ಪ ತಂದೆ ಲೇಟ್ ಭರ್ಮಪ್ಪ<br>2)ಪಿ.ನಾಗೇಂದ್ರಪ್ಪ ತಂದೆ ಲೇಟ್ ಭರ್ಮಪ್ಪ<br>3)ಪಿ.ನೀಲಕಂಠಪ್ಪ ತಂದೆ ಲೇಟ್ ಭರ್ಮಪ್ಪ<br>ಬಣವಿಕಲ್ಲು ಗ್ರಾಮ ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಗುಡೇಕೋಟೆ |
| ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 562. ವಿಸ್ತೀರ್ಣ 10-53. ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 562. ವಿಸ್ತೀರ್ಣ 10-53. ಎಕ್ರೆ ಜಮೀನನ್ನು ಸದರಿ ತಾಲೂಕು ಬಣವಿಕಲ್ಲು ಗ್ರಾಮದ ಪಿ.ನಾಗೇಂದ್ರಪ್ಪ ತಂದೆ ಲೇಟ್ ಭರ್ಮಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕಡೇಕೊಳ್ಳ ಇವರು ನಮೂನೆ-21 ನೋಟಿಸನ್ನು ದಿನಾಂಕ 15-06-2016. ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಮರಣ ಪ್ರಮಾಣ ಪತ್ರ ಹಾಗೂ ಪಹಣಿ ಕಾಲಂ 9 ರಲ್ಲಿ ಸಂಪೂರ್ಣ ಪಟ್ಟದಾರರ ತಂದೆಯ ಹೆಸರು ನಮೂದು ಇಲ್ಲದ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 59/2015-16. ದಿನಾಂಕ 16-07-2016. ರಲ್ಲಿ ಗೈರು ಮಂಜೂರು ಮಾಡಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 26-09-2016. ರಂದು ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕಡೇಕೊಳ್ಳ ಗ್ರಾಮದ ಸನಂ 562. ವಿಸ್ತೀರ್ಣ 10-53. ಎಕ್ರೆ ಜಮೀನು ನಮ್ಮ ತಂದೆಯವರಾದ ಭರ್ಮಪ್ಪ ಮತ್ತು ನಮ್ಮ ಚಿಕ್ಕಪ್ಪನವರಾದ ಶಿವನಪ್ಪ ತಂದೆ ಲಿಂಗಪ್ಪ ಇವರ ಹೆಸರುಗಳಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಸದರಿ ನಮ್ಮ ತಂದೆ ಭರ್ಮಪ್ಪ ಇವರು ದಿನಾಂಕ 16-06-1988 ರಂದು ಹಾಗೂ ನಮ್ಮ ತಾಯಿಯವರಾದ ಗಂಗಮ್ಮ ಗಂಡ ಲೇಟ್ ಭರ್ಮಪ್ಪ ಇವರು ದಿನಾಂಕ 12-08-1985 ರಂದು ಹಾಗೂ ನಮ್ಮ ಚಿಕ್ಕಪ್ಪನವರಾದ ಶಿವನಪ್ಪ ತಂದೆ ಲೇಟ್ ಲಿಂಗಪ್ಪ ಇವರು ದಿನಾಂಕ 06-02-1991 ರಂದು ನಿಧನ ಹೊಂದಿರುತ್ತಾರೆ. ಕಾರಣ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಅರ್ಜಿದಾರರು ಮರಣ ಪ್ರಮಾಣ ಪತ್ರ ಸಲ್ಲಿಸಿಲ್ಲದ ಕಾರಣ ಮತ್ತು ನಾಡಕಾರ್ಯಾಲಯದಿಂದ ವಂಶವೃಕ್ಷ ಪಡೆದು ಸಲ್ಲಿಸಿಲ್ಲದ ಇದ್ದುದರಿಂದ ಅರ್ಜಿದಾರರ ಅರ್ಜಿಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

ಪು.ತಿ.ನೋ-2

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕಡೇಕೊಳ್ಳ ಗ್ರಾಮದ ಸನಂ 562. ವಿಸ್ತೀರ್ಣ 10–53. ಎಕ್ರೆ ಜಮೀನು ಅರ್ಜಿದಾರರು ಮರಣ ಪ್ರಮಾಣ ಪತ್ರ ಹಾಗೂ ನಾಡಾಕಾರ್ಯಾಲಯದಿಂದ ವಂಶವೃಕ್ಷ ಪಡೆದು ಸಲ್ಲಿಸಿಲ್ಲದ ಕಾರಣ ಅರ್ಜಿದಾರರ ಅರ್ಜಿಯನ್ನು ತಳ್ಳಿಹಾಕುತ್ತಾ ಪಹಣಿಯನ್ನು ಯಥಾಸ್ಥಿತಿಯಂತೆ ಮುಂದುವರೆಸಲು ಆದೇಶಿಸಿ ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ಈ ಹಂತದಲ್ಲಿ ಮುಕ್ತಾಗೊಳಿಸಲು ಆದೇಶಿಸಲಾಗಿದೆ. ಹಾಗೂ ಅರ್ಜಿದಾರರು ಮೇಲ್ಕಾಣಿಸಿದ ದಾಖಲೆಗಳು ಮತ್ತು ತಿದ್ದುಪಡಿಯಾದ ಪಹಣಿಗಳೊಂದಿಗೆ ಪುನಹ ಅರ್ಜಿ ಸಲ್ಲಿಸಲು ಸಹಾ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 26–09–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಗುಡೇಕೋಟೆ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಪಿ.ನಿಂಗಪ್ಪ ತಂದೆ ಲೇಟ್ ಭರ್ಮಪ್ಪ. ಪಿ.ನಾಗೇಂದ್ರಪ್ಪ ತಂದೆ ಲೇಟ್ ಭರ್ಮಪ್ಪ. ಪಿ.ನೀಲಕಂಠಪ್ಪ ತಂದೆ ಲೇಟ್ ಭರ್ಮಪ್ಪ. ಬಣವಿಕಲ್ಲು ಗ್ರಾಮ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಗುಡೇಕೋಟೆ ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.